ಶ್ರೀ ಬಿ. ಬೈರಪ್ಪಾಜಿ.—ಲಫ್ಟ್ ನೀರಾವರಿ ಯೋಜನೆಯನ್ನು ಮೈಸೂರು ದೇಶದಾದ್ಯಂತ ಜಾರಿಗೆ ತರುವಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುವುದಕ್ಕೆ ಏನಾದರೂ ಏರ್ಪಾಡು ಮಾಡಿದೆಯೇ ಸ್ವಾಮಿ ?

Mr. SPEAKER.—Is it a supplementary ?

ಶ್ರೀ ಎಚ್. ಡಿ. ದೇವೇಗೌಡ.—ಆರ್ಥಿಕ ಸಹಾಯವನ್ನು ಕೊಡುವುದರ ಬಗ್ಗೆ ಬೊಂಬಾಯಿ ಸರ್ಕಾರ ತೆಗೆದುಕೊಂಡ ನಿಲುವನ್ನು ಹೇಳಿದರು. ನಮ್ಮ ರಾಜ್ಯ ಸರ್ಕಾರ ಲಫ್ಟ್ ಇರಿಗೇಷನ್ ಸೊಸೈಟಿಗಳಿಗೆ ಆರ್ಥಿಕ ಸಹಾಯ ಕೊಡತಕ್ಕದ್ದರ ಬಗ್ಗೆ ಅಂತಿಮವಾದ ನಿರ್ಧಾರವನ್ನು ತೆಗೆದು ಕೊಂಡಿದ್ದಾರೆಯೇ ಸ್ವಾಮಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಇತ್ತೀಚೆಗೆ ಅದಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತ್ತಿಲ್ಲ. ಆದ್ದರಿಂದ ಸರ್ಕಾರ ಈಗ ರಿವೈಸ್ ಮಾಡಬೇಕೆಂದು ಪರ್ಯಾಲೋಚನೆ ಮಾಡುತ್ತಿದೆ. ಸೇಕಡ 25 ಷೇರು ಬಂಡವಾಳಕ್ಕೆ ಬದಲಾಗಿ ಅದನ್ನು ಸೇಕಡ 10 ಎಂದು ಮಾಡಿ 25 ಭಾಗ ಸಬ್ಸಿಡಿ ಮತ್ತು 65 ಭಾಗ ಸಾಲದ ರೂಪದಲ್ಲಿ ಕೊಡಬೇಕು ಎನ್ನುವ ವಿಚಾರವನ್ನು ಪರಿಶೀಲಿಸುತ್ತಿದ್ದೇವೆ.

ಶ್ರೀ ಜೆ. ಎಸ್. ಕಬಾಡಿ.—ಟೆಕ್ನಿಕಲ್ ಅಸಿಸ್ಟೆನ್ಸ್ ಸರ್ಟಿಫಿಕೇಟನ್ನು ಕೊಡದೆ ಇರುವುದರಿಂದ ಸೊಸೈಟಿಯವರಿಗೆ ಇಷ್ಟು ದಿವಸದಿಂದ ಹಣ ದೊರಕಿಲ್ಲ ಎನ್ನುವುದು ಗೊತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—1964 ನೇ ಜುಲೈನಲ್ಲಿ ಎರಡು ಇರಾಖೆಗಳಗೂ ಸರ್ಟಿಫಿಕೇಟುಗಳನ್ನು ಕೊಡಲು ಬರೆದಿದ್ದೇವೆ. ಅವರು ಇನ್ನೂ ಕೊಟ್ಟಿಲ್ಲ ಎನ್ನುವುದು ಈಗ ಗೊತ್ತಾಗುತ್ತಿದೆ. ನಾವು ಆದಷ್ಟು ಬೇಗ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಒಬ್ಬರೇ ಇಂಜಿನಿಯರು ಇಂಥ ಕೆಲಸಗಳಿಗೆ ಸರ್ಟಿಫಿಕೇಟನ್ನು ಕೊಡಬೇಕಾಗಿರುವುದರಿಂದ ಒಂದು, ಒಂದೂವರೆ, ಎರಡು ವರ್ಷ ತಡವಾಗುತ್ತಿದೆ; ಮತ್ತು ಇದರಿಂದ ಸೊಸೈಟಿಯ ಕೆಲಸ ಕಾರ್ಯಗಳಿಗೆ ಹಣವನ್ನು ಒದಗಿಸದೆ ಕೆಲಸ ನಿಧಾನವಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—It is a relevent suggestion for future consideration by the Government.

ಶ್ರೀ ಸಿದ್ದಯ್ಯ ಕಾಶೀಮಠ.—(ಬ) ಗೆ ಉತ್ತರವಾಗಿ 'ಹಣದ ಕೊರತೆಯಿಂದಾಗಿ' ಎಂದು ಹೇಳಿದ್ದಾರೆ. ಆಹಾರವನ್ನು ಹೆಚ್ಚಾಗಿ ಉತ್ಪಾದನೆ ಮಾಡಲು ಲಫ್ಟ್ ಇರಿಗೇಷನ್ ಸ್ಕೀಂ ಬೇಕಾಗಿದೆ. ಆದ್ದರಿಂದ ಉಮರಾಜಿಗೆ ಮಂಜೂರು ಮಾಡಿರುವ ಯೋಜನೆಗೆ ಹಣವನ್ನು ಈ ವರ್ಷವೇ ದೊರಕಿಸಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಆದಷ್ಟು ಬೇಗ ಸರ್ಟಿಫಿಕೇಟುಗಳನ್ನು ತರಿಸುವ ಪ್ರಯತ್ನ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೇನೆ.

Programme to make use of rural manpower in the State.

*Q.—254. Sri S. SUBBIAH NAIK (Sullia).—

Will the Government be pleased to state :—

(*a*) whether they have chalked out any programme to make use of the rural manpower fully in the State ;

(*b*) if not, whether they would take action to include such a programme at least in the IV Five-Year Plan ?

A.—Sri RAMAKRISHNA HEGDE (Minister for Development, Panchayati Raj and Co-operation).—

(*a*) Yes.

(*b*) Does not arise in view of reply to clause (*a*) above.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಗ್ರಾಮಾಂತರ ಮಾನವ ಶಕ್ತಿಯನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ ? ಅದು ಎಲ್ಲಿ, ಯಾವಾಗ ಎಂದು ತಿಳಿಸುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ — 1961ನೆ ಇಸವಿಯಲ್ಲಿ ತೆಗೆದುಕೊಂಡ ಕೆಲಸ 1962ರಲ್ಲಿ ಪ್ರಾರಂಭವಾಯಿತು. ಎಲ್ಲೆಲ್ಲಿ ತೆಗೆದುಕೊಂಡಿದ್ದೇವೆನ್ನುವುದರ ಬಗ್ಗೆ ಒಂದು ದೊಡ್ಡ ಪಟ್ಟಿ ಇದೆ. ಒಟ್ಟು 40 ಕಡೆ ಪ್ರಾರಂಭ ಮಾಡಿದ್ದೇವೆ.

Sri T. R. PARAMESHWARAIAH.—Which is the agency that assesses the potential of the rural man-power ?

Sri RAMAKRISHNA HEGDE.—It is the Block Development Organisation that executes this scheme.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಅದರ ಕಾರ್ಯಕ್ರಮ ಏನು, ಅದಕ್ಕೆ ಹಣವನ್ನು ಒದಗಿಸುವವರು ಯಾರು, ರಾಜ್ಯ ಸರ್ಕಾರದವರೇ, ಕೇಂದ್ರ ಸರ್ಕಾರದವರೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಯೋಜನೆ ಪ್ರಾರಂಭವಾದಾಗ 1961—62 ರಲ್ಲಿ ನೂರಕ್ಕೆ ನೂರು ಭಾಗವನ್ನು ಕೇಂದ್ರ ಸರ್ಕಾರದ ಸಹಾಯ ಸಿಕ್ಕುತ್ತಿತ್ತು. ಆ ಮೇಲೆ 50ರಷ್ಟು ಕೇಂದ್ರ ಸರ್ಕಾರ 50ರಷ್ಟು ರಾಜ್ಯ ಸರ್ಕಾರ ಕೊಡಬೇಕು ಎಂದು ತೀರ್ಮಾನವಾಗಿದೆ. ಒಟ್ಟು ಹಣ ಖರ್ಚಾಗಿರತಕ್ಕದ್ದು 1960—61ರಲ್ಲಿ 31 ಸಾವಿರ ರೂಪಾಯಿ, 1961—62ರಲ್ಲಿ 3,50,000 ರೂಪಾಯಿ, 1962—63ರಲ್ಲಿ 4,14,000 ರೂಪಾಯಿ ಮತ್ತು 1963—64ರಲ್ಲಿ 13-14 ಲಕ್ಷ ರೂಪಾಯಿ. 1964—65ರ ಲೆಕ್ಕ ನನ್ನಲ್ಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಗ್ರಾಮಾಂತರ ಮಾನವ ಶಕ್ತಿ ಯೋಜನೆಯಲ್ಲಿ ಕೈಲಸ ಮಾಡತಕ್ಕದ್ದರ ಬಗ್ಗೆ ಏನ ಪ್ರೊಸೀಜರ್ ಇದೆಯೋ ಅದರಲ್ಲಿ ಅನೇಕ ತೊಂದರೆಗಳಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಒಂದು ಹೊಸ ಯೋಜನೆ. ಇದರಲ್ಲಿ ನಮ್ಮ ಉದ್ದೇಶ ಏನೆಂದರೆ, ರೈತರಿಗೆ ಯಾವ ಕಾಲದಲ್ಲಿ ಕೆಲಸ ಸಾಕಾದಷ್ಟು ಇರುವುದಿಲ್ಲವೋ ಆಗ ಪೂರ್ತಿ ಪ್ರಾಜೆಕ್ಟ್‌ಗಳನ್ನು ಮಾಡಿ ಅಷ್ಟಗಳಲ್ಲಿ ರೈತರ ಸೇವೆಯನ್ನು ಉಪಯೋಗಿಸಬೇಕು ಎನ್ನುವುದೇ ಆಗಿದೆ.

1-30 P.M.

ಶ್ರೀ ಆರ್. ಎನ್. ಪಾಟೀಲ್.—ಈ ಕಾರ್ಯಕ್ರಮಕ್ಕೆ ನಿಗದಿ ಮಾಡಿದ ಹಣ ಎಷ್ಟು ? ಈ ಯೋಜನೆ ಹಿಂದುಳಿದ ಪ್ರದೇಶದಲ್ಲಿ ತೆಗೆದುಕೊಳ್ಳಲಾಗುವುದೇ ಅಥವಾ ಮುಂದುವರಿದ ಪ್ರದೇಶದಲ್ಲಿ ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದಕ್ಕೆ ನಿಗದಿ ಮಾಡಿದ ಹಣ ಇಷ್ಟು ಎಂದು ಇಲ್ಲ. ಕೇಂದ್ರ ಸರಕಾರದವರು ಹೊಸದಾಗಿ ಒಂದು ಪ್ರೋಗ್ರಾಂ ಮಾಡಿದ್ದಾರೆ. ಪ್ರತಿ ವರ್ಷ ಕೆಲಸ ಮಾಡಿದ ಪ್ರೋಗ್ರೆಸ್ ತೋರಿಸಿದರೆ ಹೊಸದಾಗಿ ಹಣ ಮಂಜೂರು ಮಾಡಿ ಕಳಿಸುತ್ತಾರೆ. ಮುಖ್ಯವಾಗಿ ಈ ಯೋಜನೆ ಹಿಂದುಳಿದ ಪ್ರದೇಶದಲ್ಲಿ ತೆಗೆದುಕೊಳ್ಳಲಾಗುವುದು. ಎಲ್ಲಿ ರೈತರಿಗೆ ಉಪಯೋಗವಿಲ್ಲ, ಕೆಲಸ ಮಾಡಲು ಅವಕಾಶವಿಲ್ಲ. ಎಲ್ಲಿ ನೀರಾವರಿ ಅನುಕೂಲತೆ ಇಲ್ಲ; ಎಲ್ಲಿ ರೈತರು ಬಹಳ ಕಾಲ ನಿರುದ್ಯೋಗಿಯಾಗಿರುತ್ತಾರೊ ಅಂಥ ಪ್ರದೇಶದಲ್ಲಿ ಅವರ ಲಾಭಕ್ಕಾಗಿ ಈ ಯೋಜನೆ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಸ್ಕೀಂನಿಂದ ಯಾವ ತರಹದ ಕೆಲಸ ಮಾಡಬಾಗುವುದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸ್ಕೀಂ ಪ್ರಕಾರ ಪ್ರೊಡಕ್ಟಿವ್ ಪರ್ಪಜಿಸ್‌ಗೋಸ್ಕರ ಉಪಯೋಗಿಸುತ್ತೇವೆ. ನೀರಾವರಿ ಯೋಜನೆ, ಸಾಯಿಲ್ ಕನ್‌ಸರ್ವೇಶನ್ ಅಪ್ಫೋರೆಸ್ಟೇಶನ್, ಗೋಪಾಳ, ಫಿಡರ್ ಚಾನೆಲ್ಸ್ ರಿಪೇರಿ ಮಾಡುವುದು ಹಾಗೂ ರಸ್ತೆ ಕೆಲಸ ಇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈ ಯೋಜನೆ ಪ್ರಾರಂಭ ಮಾಡುವುದಕ್ಕೆ ಏನು ಆಧಾರ ಇಟ್ಟುಕೊಳ್ಳುತ್ತೀರಿ ?

ಶ್ರೀ ರಾವ ಕೃಷ್ಣ ಹೆಗ್ಗಡೆ.—ಯಾವ ಪ್ರದೇಶದಲ್ಲಿ ರೈತನಿಗೆ ಸಾಕಷ್ಟು ಕೆಲಸ ಇಲ್ಲವೋ, ಎಲ್ಲಿ ರೈತನ ಶ್ರಮ ವ್ಯರ್ಥವಾಗುತ್ತದೆಯೋ ಅಂಥ ಪ್ರದೇಶದಲ್ಲಿ ಈ ಸ್ಕೀಂ ಅನ್ವಯ ಸರಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ತಾಲ್ಲೂಕಿನಲ್ಲಿ ಯಾವ ಸ್ಥಳದಲ್ಲಿ ರೂರಲ್ ಮ್ಯಾನ್ ಪವರ್ ಉಪಯೋಗಿಸಿ ಅವರ ಶ್ರಮದಾನದಿಂದ ಎಷ್ಟರ ಮಟ್ಟಿಗೆ ಅರ್ಥಿಕವಾಗಿ ಅವರು ಮುಂದೆ ಬಂದಿದ್ದಾರೆ ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ :—ಇಂಥ ಸ್ಥಳದಲ್ಲಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಎರಡು ವರ್ಷಗಳಿಂದ ಪ್ರಾರಂಭವಾಗುವುದರಿಂದ ಅದನ್ನು ಅಪೆಸ್ ಮಾಡಬೇಕಾಗುತ್ತದೆ.

Sri D. PARAMESWARAPPA.—The Hon'ble Minister stated that the amount under the scheme could be utilised for rural roads. Is it a fact that instructions have been issued recently that the amount should not be utilised on rural roads ?

Sri RAMAKRISHNA HEGDE.—I pointed out that construction of roads gets the last priority. That is not the purpose for which we are spending this money. We want to spend the money for productive purposes like digging irrigation wells and so on.

ಶ್ರೀ ಎಚ್. ಡಿ. ದೇವೇಗೌಡ.—ಸಾಯಿರ್ ಕಾರ್ಪೊರೇಷನ್ ಕಾರ್ಯಕ್ರಮದಲ್ಲಿ ಸಾಕಷ್ಟು ಟೆಕ್ನಿಕರ್ ಅಸಿಸ್ಟೆನ್ಸ್ ಇಲ್ಲದೇ ಇರುವುದರಿಂದ ಅನನುಕೂಲವಾಗಿದೆ. ಈ ತೊಂದರೆಯನ್ನು ನಿರಿಪಡಿಸಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಡೆ.—ಅದು ಸಾಕಷ್ಟು ಪ್ರಮಾಣದಲ್ಲಿಲ್ಲ ಎಂಬುದು ನಿಜ. ಯಾವ ಕೆಲಸ ಮಾಡುವುದಕ್ಕೆ ಸಾಧ್ಯವೋ ಅದನ್ನು ತೆಗೆದುಕೊಳ್ಳುತ್ತೇವೆ. ಎಲ್ಲಿ ಟೆಕ್ನಿಕರ್ ಅಸಿಸ್ಟೆನ್ಸ್ ಬೇಕಾಗುತ್ತದೆಯೋ ಅಲ್ಲಿ ಅದನ್ನು ಮೊದಲು ಪೂರೈಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ನುಬ್ಬಯ್ಯ ನಾಯಕ್.—ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ಇಂಥ ಒಂದು ಜಾಗ ಇದ್ದರೆ ಅದನ್ನು ಹೇಳುತ್ತೀರಾ ?

Sri RAMAKRISHNA HEGDE.—I am prepared to give the list or lay it on the Table of the House.

Construction of High School Buildings at Santhebachahalli and Agalya in Krishnarajapet Taluk.

*Q.—291. Sri N. NANJE GOWDA (Krishnarajapet).—

Will the Government be pleased to state :—

(a) the amount deposited by the public for the construction of High School building at Santhebachahalli and Agalya in Santhebachahalli Hobli, Krishnarajapet Taluk, together with the date of deposit ;

(b) when tenders were called for, for this purpose ;

(c) the reasons for not commencing the work in spite of accepting the tenders ?

A.—S. R. KANTHI (Minister for Education).—

(a) Rs. 30,000 each in 1951.

(b) No tenders were called for.

(c) Does not arise. The work was to have been executed by the former District Board, Mandya. On the abolition of the District Boards in 1959, the estimate was transferred to the Public Works Department. Revised estimates are under submission to Government.

ಶ್ರೀ ಎನ್. ನಂಜೇಗೌಡ.—ಈ ಸ್ಕೂಲು ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ ಎಸ್ಟಿಮೇಟು ಆಗಿದೆಯೇ ?